ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2019–20 ದಿನಾಂಕ: 26–02–2020

# ಪತ್ರಿಕಾ ಆಮಂತ್ರಣ

1. ಕಬ್ಸ್, ಬುಲ್‌ಬುಲ್ಸ್ ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಚತುರ್ಥ ಚರಣ್, ಹೀರಕ್ ಪಂಕ್ ಮತ್ತು ರಾಜ್ಯ ಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭ ಕುರಿತು ಪತ್ರಿಕಾಗೋಷ್ಠಿ :

ಪಿ. ಜಿ. ಆರ್. ಸಿಂಧ್ಯ
ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ದಿನಾಂಕ : 27–02–2020 ಗುರುವಾರ ಮಧ್ಯಾಹ್ನ 12–00 ಗಂಟೆಗೆ

ಸ್ಥಳ : ಬೆಂಗಳೂರು ಪ್ರೆಸ್‌ಕ್ಲಬ್, ಬೆಂಗಳೂರು

2. ಪತ್ರಿಕಾಗೋಷ್ಠಿ :

ಡಿ. ಎಸ್. ಅರುಣ್
ಅಧ್ಯಕ್ಷರು
ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮ

ದಿನಾಂಕ : 27–02–2020 ಗುರುವಾರ ಅಪರಾಹ್ನ 2–30 ಗಂಟೆಗೆ

ಸ್ಥಳ : ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮ, ವಿ.ವಿ. ಗೋಪುರ, 21ನೇ ಮಹಡಿ
ಡಾ : ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು –560 001

# ಪತ್ರಿಕಾ ಪ್ರಕಟಣೆ

## ವಿದೇಶದಲ್ಲಿ ನೆಲೆಸಿರುವ ಭಾರತೀಯರಲ್ಲಿ ಕರ್ನಾಟಕದ ಪಾಲು ಪ್ರಮುಖ

ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ವಿ. ಮುರಳೀಧರನ್

ಬೆಂಗಳೂರು, ಫೆಬ್ರವರಿ 26 (ಕರ್ನಾಟಕ ವಾರ್ತೆ)

ಉದ್ಯೋಗ, ಶಿಕ್ಷಣ ಹಾಗೂ ವ್ಯವಹಾರ ಸೇರಿದಂತೆ ಇತರೆ ಉದ್ದೇಶಗಳಿಗಾಗಿ ವಿದೇಶಗಳಲ್ಲಿ ಮೂರು ಕೋಟಿಗೂ ಹೆಚ್ಚು ಭಾರತೀಯರು ನೆಲೆಸಿ ಅನೇಕ ಉನ್ನತ ಹುದ್ದೆಗಳಲ್ಲಿ ಹೆಸರು ಮಾಡಿದ್ದಾರೆ. ವಿದೇಶಕ್ಕೆ ಅನೇಕ ಕಾರಣಗಳಿಗಾಗಿ ತೆರಳುವ ಭಾರತೀಯರಿಗಾಗಿ ಅನುಕೂಲವಾಗುವಂತ ಯೋಜನೆಗಳನ್ನು ಕೇಂದ್ರ ಸರ್ಕಾರ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ನಿಟ್ಟಿನಲ್ಲಿ ರಾಜ್ಯ ಸರ್ಕಾರಗಳ ಸಹಯೋಗದಲ್ಲಿ ಕಾರ್ಯಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ವಿ. ಮುರಳೀಧರನ್ ಅವರು ಹೇಳಿದರು.

ಇಂದು ವಿಕಾಸ ಸೌಧದಲ್ಲಿ ಹಮ್ಮಿಕೊಳ್ಳಲಾಗಿದ್ದ ಸುರಕ್ಷಿತ ಮತ್ತು ಕಾನೂನಾತ್ಮಕ ವಲಸೆ, ಪಾಸ್‌ಪೋರ್ಟ್ ಸೇವೆಗಳು, ಭಾರತೀಯ ಸಂಜಾತರ ಒಳಗೊಳ್ಳುವಿಕೆ ಮತ್ತು ವಿದೇಶಿ ವ್ಯವಹಾರಗಳಿಗೆ ಸಂಬಂಧಿಸಿದಂತೆ ಒಂದು ದಿನದ "ವಿದೇಶಿ ಸಂಪರ್ಕ" ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ಕೇಂದ್ರ ಸರ್ಕಾರ ಈಗಾಗಲೇ ಅನೇಕ ಕಾರ್ಯಕ್ರಮ ಜಾರಿಗೆ ತಂದಿದ್ದು, ಅವುಗಳನ್ನು ಸರಳೀಕರಿಸಿ, ಮತ್ತಷ್ಟು ಜನೋಪಯೋಗಿ ಕಾರ್ಯಕ್ರಮಗಳನ್ನು ಜಾರಿಗೆ ತರುವ ಉದ್ದೇಶದಿಂದ ಇಂತಹ ಕಾರ್ಯಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಕರ್ನಾಟಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತಕ್ಕೆ ಅತ್ಯುತ್ತಮ ಪ್ರತಿಭೆಗಳನ್ನು ನೀಡಿದ ಕೀರ್ತಿ ಪಡೆದ ರಾಜ್ಯವಾಗಿದೆ ಎಂದು ತಿಳಿಸಿದರು.

ಪಾಸ್‌ಪೋರ್ಟ್ ವ್ಯವಸ್ಥೆಯನ್ನು ಸರಳೀಕರಿಸಲು ವಿದೇಶಾಂಗ ಸಚಿವಾಲಯ ಮೋಬೈಲ್ ಆಪ್ ನ್ನು ಹೊರತರಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ವಿಸಾಕ್ಕೆ ಸಂಬಂಧಿಸಿದಂತೆ 170 ದೇಶಗಳೊಂದಿಗೆ ಈ–ವೀಸಾ ಸೇವೆಯನ್ನು ಆರಂಭಿಸಿದ್ದು, ಇದರಿಂದ ಭಾರತಕ್ಕೆ ಆಗಮಿಸುವ ವಿದೇಶಿಗರಿಗೆ ಅನುಕೂಲಕರವಾಗಲಿದೆ.

ವಿದೇಶಗಳಲ್ಲಿ ಸಂಕಷ್ಟಕ್ಕೆ ಸಿಲುಕುವ ಭಾರತೀಯರಿಗೆ ನೆರವಾಗುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಈಗಾಗಲೇ 24*7 ಸಮಯ ಕಾರ್ಯನಿರ್ವಹಿಸುವ ಕಾಲ್‌ಸೆಂಟರ್ ತೆರೆಯಲಾಗಿದ್ದು, ವಿದೇಶಗಳಲ್ಲಿ ವಿವಿಧ ಉದ್ದೇಶಗಳಿಗಾಗಿ ನೆಲೆಸಿರುವ ಭಾರತೀಯರು ಅಲ್ಲಿನ ರಾಯಬಾರಿ ಕಚೇರಿಗಳಲ್ಲಿ ನೋಂದಾಯಿಸುವ ಜವಬ್ದಾರಿಯನ್ನು ಮರೆಯಬಾರದು.

ಪ್ರತಿ ಲೋಕಸಭಾ ಕ್ಷೇತ್ರಗಳಲ್ಲಿ ಪಾಸ್‌ಪೋರ್ಟ್ ಪಡೆಯುವ ಸೇವಾ ಕೇಂದ್ರಗಳನ್ನು ತೆರೆಯಲು ಉದ್ದೇಶಿಸಲಾಗಿದ್ದು, ಕೇಂದ್ರ ಸರ್ಕಾರ ರಾಜ್ಯಗಳೊಂದಿಗೆ ಕೈ ಜೋಡಿಸುವ ಮೂಲಕ ವಿದೇಶ ಯಾತ್ರೆ ಅಥವಾ ವಿದೇಶಿಗರ ಆಗಮನದ ಬಗ್ಗೆ ಹೆಚ್ಚಿನ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ರಾಜ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಮಾತನಾಡಿ ವಿದೇಶಿ ಪ್ರಯಾಣಗಳಿಗೆ ಸಂಬಂದಿಸಿದಂತೆ ಸರಳೀಕೃತ ವ್ಯವಸ್ಥೆಯನ್ನು ಜಾರಿಗೆ ತರಬೇಕಾದ ಅವಶ್ಯಕತೆ ಇದೆ. ಅತ್ಯಂತ ಹೆಚ್ಚು ಅನಿವಾಸಿ ಭಾರತೀಯರು ಇರುವ ರಾಜ್ಯ ನಮ್ಮದಾಗಿದ್ದು, ಒಟ್ಟಾರೆಯಾಗಿ ಈಗಿರುವ ವ್ಯವಸ್ಥೆಯನ್ನು ಸರಳೀಕೃತಗೊಳಿಸಬೇಕು ಎಂದು ಕಾರ್ಯಾಗಾರದಲ್ಲಿ ಸೂಚಿಸಿದರು.

ಕರ್ನಾಟಕದವರು ಅಮೇರಿಕಾ ದೇಶದ ವೀಸಾ ಪಡೆಯಲು ಚೆನ್ನೈನಲ್ಲಿರುವ ಅಮೇರಿಕಾ ಎಂಬೆಸ್ಸಿಯ ಕಚೇರಿಗೆ ಅಲೆದಾಡಬೇಕಾಗಿದ್ದು, ಅವರ ವೀಸಾ ನೀಡುವ ಕಚೇರಿಯನ್ನು ಬೆಂಗಳೂರಿನಲ್ಲಿಯೇ ಆರಂಭಿಸಲು ಕ್ರಮಕೈಗೊಳ್ಳುವಂತೆ ಕೇಂದ್ರ ಸಚಿವರಿಗೆ ಮನವಿ ಮಾಡಿದರು.

ವಿದೇಶಿದಲ್ಲಿ ಭಾರತೀಯರು ಮರಣ ಹೊಂದಿದಾಗ ಅವರ ಶವವನ್ನು ತಾಯ್ನಾಡಿಗೆ ತರುವ ಕೆಲಸ ಅತ್ಯಂತ ಕ್ಲಷ್ಟಕರವಾಗಿದ್ದು, ಈ ಕುರಿತಂತೆ ವಿದೇಶಗಳೊಂದಿಗೆ ಚರ್ಚಿಸಿ ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳುವ ಮೂಲಕ ಸರಳೀಕರಿಸಬೇಕು ಎಂದು ಹೇಳಿದರು.

ವಿದೇಶಗಳಲ್ಲಿ ಉನ್ನತ ಶಿಕ್ಷಣಕ್ಕಾಗಿ ತೆರಳುವ ವಿದ್ಯಾರ್ಥಿಗಳಿಗೆ ಅನೇಕ ಸಮಸ್ಯೆಗಳಿದ್ದು ಈ ಬಗ್ಗೆ ಕೇಂದ್ರ ಸರ್ಕಾರ ಗಮನಹರಿಸಬೇಕು ಮತ್ತು ಅಲ್ಲಿನ ಎರಡನೆಯ ಪ್ರಜೆಗಳಾಗಿ ನೋಡುತ್ತಿರುವ ಮನೋಭಾವ ಅತ್ಯಂತ ಕೆಟ್ಟದ್ದು ಎಂದು ಕಳವಳ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯ್ ಭಾಸ್ಕರ್ ಅವರು ಮಾತನಾಡಿ ದೇಶದಲ್ಲಿಯೇ ಮೊತ್ತ ಮೊದಲ ಬಾರಿಗೆ ಪಾಸ್‌ಪೋರ್ಟ್ ಪಡೆಯುವಾಗ ಇದ್ದ ಪೊಲೀಸ್ ಪರಿಶೀಲನೆಯನ್ನು ಆನ್‌ಲೈನ್‌ಗೊಳಿಸಿ ಪ್ರತಿ ಪೊಲೀಸ್ ಸ್ಟೇಷನ್ನಿಗೆ ಟ್ಯಾಬ್ ನೀಡಲಾಗಿದೆ ಎಂದು ತಿಳಿಸಿದರು.

ಈ ಹಿಂದೆ ಪೊಲೀಸ್ ಇಲಾಖೆಗೆ ಪಾಸ್‌ಪೋರ್ಟ್ ಪಡೆಯುತ್ತಿರುವವರ ಪರಿಶೀಲನೆ ನಡೆಸಿ ವರದಿ ನೀಡಲು ಕನಿಷ್ಟ 30 ದಿನಗಳು ಬೇಕಾಗಿತ್ತು, ಆನ್‌ಲೈನ್ ಆದನಂತರ ಕೇವಲ 8-10 ದಿನಗಳಲ್ಲಿ ಪರಿಶೀಲನೆ ಪೂರ್ಣಗೊಳ್ಳಲಿದೆ. ಕೇಂದ್ರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ರಾಜ್ಯದಲ್ಲಿ ಜಾರಿಗೆ ತರಲು ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ಸಂಜಯ್ ಭಟ್ಟಚಾರ್ಯ ಅವರು ಮಾತನಾಡಿ ಕಾರ್ಯಾಗಾರದ ಉದ್ದೇಶಗಳನ್ನು ಸಭೆಗೆ ವಿವರಿಸದರು. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿ ಶ್ರೀಮತಿ ಹೇಮಾಲತ ಅವರು ಸ್ವಾಗತಿಸಿದರು ಮತ್ತು ಜಂಟಿ ಕಾರ್ಯದರ್ಶಿ ಡಾ. ವಿಜಯ ಮಹಂತೇಶ್ ಅವರು ವಂದಿಸಿದರು.

## ವಸತಿ ಸಚಿವರ ಪ್ರವಾಸ

ಬೆಂಗಳೂರು, ಫೆಬ್ರವರಿ 26 (ಕರ್ನಾಟಕ ವಾರ್ತೆ)

ವಸತಿ, ತೋಟಗಾರಿಕೆ ಮತ್ತು ರೇಷ್ಮೆ ಸಚಿವ ವಿ. ಸೋಮಣ್ಣ ಅವರು ಫೆಬ್ರವರಿ 28 ರಂದು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ರಾತ್ರಿ ಕೇಂದ್ರಸ್ಥಾನಕ್ಕೆ ಹಿಂತಿರುಗುವರು.

## ಸಾರಿಗೆ ಸೌಕರ್ಯ/ರಹದಾರಿ ಮಾರ್ಗ ಕುರಿತು ಸಭೆ

**ಬೆಂಗಳೂರು, ಫೆಬ್ರವರಿ 26 (ಕರ್ನಾಟಕ ವಾರ್ತೆ)**

**ಅಧ್ಯಕ್ಷರು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಬೆಂಗಳೂರು ಗ್ರಾಮಾಂತರ ಹಾಗೂ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಇವರು ಜಿಲ್ಲಾ ಸಂಕೀರ್ಣ ಭವನ, ಬೀರಸಂದ್ರ, ದೇವನಹಳ್ಳಿ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದಂತೆ ಮಾರ್ಚ್ 7 ರಂದು ಬೆಳಿಗ್ಗೆ 11–00 ಗಂಟೆಗೆ ಸಭೆಯನ್ನು ಏರ್ಪಡಿಸಿದ್ದಾರೆ. ಆಸಕ್ತರು ಇದರಲ್ಲಿ ಭಾಗವಹಿಸಲು ಪ್ರಕಟಣೆ ತಿಳಿಸಿದೆ.**

ಅಂತರರಾಜ್ಯ ಸಂಪರ್ಕಕಲ್ಪಿಸುವ ನಿಟ್ಟಿನಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನನಿಲ್ದಾಣದಿಂದ
ಮತ್ತೊಂದು ಹೊಸ ಮಾರ್ಗದಲ್ಲಿ ಫ್ಲೈಬಸ್ ಸಾರಿಗೆ ಸೇವೆ ಪ್ರಾರಂಭ

**ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ – ಅನಂತಪುರಕ್ಕೆಕಾರ್ಯಾಚರಣೆ**

*****

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ, ಬೆಂಗಳೂರು ಕೇಂದ್ರೀಯ ವಿಭಾಗದ ವತಿಯಿಂದ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಅನಂತಪುರಕ್ಕೆ ಫ್ಲೈ ಬಸ್ ಸಾರಿಗೆಯನ್ನು ಹೊಸದಾಗಿ ಪ್ರಾರಂಭಿಸಿ ದಿನಾಂಕ 13–03–2020 ರಿಂದ ಕಾರ್ಯಾಚರಣೆ ಮಾಡಲಾಗುತ್ತದೆ.

ವೇಳಾ ಪಟ್ಟಿ ಮತ್ತು ಪ್ರಯಾಣದರದ ವಿವರಗಳು

**ಕೆ.ಐ.ಎ.ಎಲ್– ಅನಂತಪುರ ವಯಾ ಚಿಕ್ಕಬಳ್ಳಾಪುರ (ಫ್ಲೈ ಬಸ್)**

| ಮಾರ್ಗ | ಪ್ರಾರಂಭಿಕ ದಿನಾಂಕ | ಪ್ರಯಾಣದ ರ ವಯಸ್ಕರು ರೂ. ಪೈಸೆ | ಕೆ.ಐ.ಎ.ಎಲ್ ನಿಂದ ಹೊರಡುವ ಸಮಯ | ಅನಂತಪುರ ತಲುಪುವ ಸಮಯ | ಅನಂತಪುರ ದಿಂದ ಹೊರಡುವ ಸಮಯ | ಕೆ.ಐ.ಎ.ಎಲ್‌ತ ಲುಪುವ ಸಮಯ |
|---|---|---|---|---|---|---|
| ಕೆ.ಐ.ಎ.ಎಲ್ –ಅನಂತಪುರ | 13.03.2020 | 700–00 | 2200, 0800 | 0115, 1115 | 0230, 1230 | 0545, 1545 |

Karnataka State Road Transport Corporation is operating new FLY BUS Service in one more new route for the convenience of the travelling public i.e.,**KIAL to Anantapura Fly Bus service w.e.f 13.03.2020.**The Ticket fare and time table details are as follows:

**KIAL to AnantapuraViaChikkaballapura (Fly Bus)**

| Route | Adult Fare Rs. Ps | Departure From KIAL | Arrival at Anantapura | Departure From Anantapura | Arrival at KIAL |
|---|---|---|---|---|---|
| KIAL - Anantapura | 700- 00 | 2200, 0800 | 0115, 1115 | 0230, 1230 | 0545, 1545 |

Advance reservation of tickets for the above services can be done at various reservation counters situated in Bangalore city and throughout the Karnataka State, besides private reservation counters in neighboring states viz., Andhra Pradesh, Tamil Nadu and Kerala. Tickets can also be reserved through internet (www.ksrtc.in).

**ಬೆಂಗಳೂರು ಜಲಮಂಡಲಿ ಫೆಬ್ರವರಿ 27 ಗುರುವಾರ ರಂದು ಸಕಾನಿಅ(ದಕ್ಷಿಣ-4), (ಪಶ್ಚಿಮ-4), (ನೈರುತ್ಯ-4), (ವಾಯುವ್ಯ-3),(ಈಶಾನ್ಯ-3) (ಪೂರ್ವ-4) ಮತ್ತು (ವಾಯುವ್ಯ-2) ಉಪವಿಭಾಗಗಳಲ್ಲಿ ನೀರಿನ ಅದಾಲತ್**

*****

ಬೆಂಗಳೂರು ಜಲಮಂಡಲಿಯು ದಿನಾಂಕ:27.02.2020 ಗುರುವಾರ ರಂದು ಸಕಾನಿಅ(ದಕ್ಷಿಣ-4), (ಪಶ್ಚಿಮ-4), (ನೈರುತ್ಯ-4), (ವಾಯುವ್ಯ-3), (ಈಶಾನ್ಯ-3), (ಪೂರ್ವ-4) ಮತ್ತು (ವಾಯುವ್ಯ-2) ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತ್ತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸುತ್ತಿದ್ದು, ಅದಾಲತ್ ನಡೆಯುವ ಸ್ಥಳಗಳ ವಿವರ ಈ ಕೆಳಗಿನಂತಿದೆ.

| **ಉಪವಿಭಾಗದ ಹೆಸರು** | **ವಿಳಾಸ** | **ದೂರವಾಣಿ ಸಂಖ್ಯೆ** |
|---|---|---|

| | | |
|---|---|---|
| ದಕ್ಷಿಣ-4 | ವಾಟರ್ ಟ್ಯಾಂಕ್ ಹತ್ತಿರ, 2ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಬಿ.ಟಿ.ಎಂ 2ನೇ ಹಂತ | 40977432 |
| ಪಶ್ಚಿಮ-4 | ವಿಜಯನಗರ ಬಸ್ ನಿಲ್ದಾಣದ ಎದುರು,8ನೇ ಮುಖ್ಯ ರಸ್ತೆ, ಎಂ.ಸಿ. ಲೇ ಔಟ್ | 23350020 |
| ನೈರುತ್ಯ-4 | ಕಪಿಲ ಭವನ, 1ನೇ ಮಹಡಿ, 36ನೇ ಅಡ್ಡರಸ್ತೆ, 11ನೇ ಮುಖ್ಯರಸ್ತೆ, 4ನೇ 'ಟಿ' ಬ್ಲಾಕ್, ಹೆಡ್ ಪೋಸ್ಟ್ ಆಫೀಸ್ ಹತ್ತಿರ, ಜಯನಗರ | 22945148 |
| ವಾಯುವ್ಯ-3 | ಪೀಣ್ಯ 2ನೇ ಹಂತ, ಶ್ರೀರಾಮ ಡಿಲಕ್ಸ್ ಹೋಟೆಲ್ ಹಿಂಭಾಗ, ಪೀಣ್ಯ 2ನೇ ಹಂತ, ಬಸ್ ನಿಲ್ದಾಣ. | 28372030 |
| ಈಶಾನ್ಯ-3 | ನಂ.3, 3ನೇ ಅಡ್ಡರಸ್ತೆ, ಪಿ&ಟಿ ಕಾಲೋನಿ, ಆರ್.ಟಿ.ನಗರ | 22945139 |
| ಪೂರ್ವ-4 | ಎ. ನಾರಾಯಣಪುರ ಮುಖ್ಯ ರಸ್ತೆ, ಕೆ.ಆರ್.ಪುರಂ ರೈಲ್ವೇ ನಿಲ್ದಾಣದ ಎದುರು, ಪಟಾಲಮ್ಮ ದೇವಸ್ಥಾನದ ಹತ್ತಿರ, ಹನುಮಾನ್ ಜಂಕ್ಷನ್, ಎ.ನಾರಾಯಣಪುರ. | 28510008 |
| ವಾಯುವ್ಯ-2 | ಮೋದಿ ಆಸ್ಪತ್ರೆ ಹಿಂಭಾಗ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಮಹಾಲಕ್ಷ್ಮಿಪುರಂ | 22945184 |

**ಮೇಲೆ ತಿಳಿಸಲಾದ ಉಪವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಸೇವಾಠಾಣೆಗಳ ವಿವರ ಈ ಕೆಳಕಂಡಂತಿದೆ.**

ದಕ್ಷಿಣ-4 : ಹೆಚ್.ಎಸ್. ಆರ್.ಲೇಔಟ್, ಕೋಡಿಚಿಕ್ಕನ ಹಳ್ಳಿ,

ಪಶ್ಚಿಮ -4 : ಚಂದ್ರಲೇಔಟ್-1 , ವಿಜಯನಗರ ಒ.ಹೆಚ್.ಟಿ,

ನೈರುತ್ಯ-4 : ಜೆ.ಪಿ.ನಗರ-1, ಜಯನಗರ 4ನೇ ಟಿ.ಬ್ಲಾಕ್, ಜಯನಗರ 4ನೇ ಬ್ಲಾಕ್, ಹೊಂಬೇಗೌಡ ನಗರ, ಭೈರಸಂದ್ರ. ವಾಯುವ್ಯ-3 : ಹೆಗ್ಗನಹಳ್ಳಿ, ಪೀಣ್ಯ ದಾಸರಹಳ್ಳಿ, ಪೀಣ್ಯ.

ಈಶಾನ್ಯ-3 : ಆರ್.ಟಿ.ನಗರ, ಕಾವಲ್ ಭೈರಸಂದ್ರ, ಸಂಜಯನಗರ, ಬಿ.ಇ.ಎಲ್. ರಸ್ತೆ,

ಪೂರ್ವ-4 : ಎ.ನಾರಾಯಣಪುರ, ವಿಜ್ಞಾನ ನಗರ, ಜಗದೀಶ್ ನಗರ, ದೊಡ್ಡನಕುಂದಿ.

ವಾಯುವ್ಯ-2 ; ಕಾಮಾಕ್ಷಿಪಾಳ್ಯ, ಕಮಲಾನಗರ, ಅಗ್ರಹಾರ ದಾಸರಹಳ್ಳಿ. ವೆಸ್ಟ್ ಆಫ್ ಕಾರ್ಡ್ ರೋಡ್-1,2

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸಾಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ.

**BWSSB:Water Adalath in AEE(South-4) , AEE(West-4), AEE(South West-4), AEE(North West-3), AEE( North East-3) , AEE(East-4) &(North West-2) sub division on February 27th**

BWSSB water Adalath is held on 27.02.2020 in AEE(South-4), AEE(West-4), AEE(South west-4), AEE(North West-3), AEE(North East-3) ,AEE(East-4) & (North West-2) sub divisions from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues. The details of the places where the Adalath is held is as follows.

| Sub-division | Address | Phone Number |
|---|---|---|
| South-4 | Near Water Tank, 2nd Cross, 9th Main, BTM 2nd Stage. | 40977432 |
| West-4 | opposite Vijayanagara Bus stand, 8th Main, MC Layout | 23350020 |
| South West-4 | Kapila Bhavan, 1st Floor, 36th cross, 11th Main road, Near Head Post Office,4th 'T' Block, Jayanagar. | 22945148 |
| North West-3 | Peenya 2nd stage, Behind Sriram Dulex Hotel, Peenya 2nd stage Bus Stop. | 28372030 |
| North East-3 | No.3, 3rd cross, P&T Colony, RT Nagar, | 22945139 |
| East-4 | A. Narayanapura Main Road,opposite to K.R. Puram Railway Station, Near Pattalamma Temple, Hanuman Junction, A. Narayanapura. | 28510008 |

| | | |
|---|---|---|
| North West-2 | Behind Modi hospital, West off chord road, Mahalakshmipuram. | 22945184 |

**The details of service stations coming under the subdivisions mentioned above are as follows:**

South -4 : HSR Layout, Kodichikkanahalli

West-4 : Chandra Layout-1, Vijayanagar OHT

South west-4 : JP Nagar-1, Jayanagar 4th 'T' Block, 4th Block, Hombegowda Nagar, Byrasandra

North West -3 : Hegganahalli, Peenya Dasarahalli, Peenya,

North East-3 : R.T.Nagar, Kaval Byrasandra, Sanjayanagara, BEL Road,

East-4 : A.Narayanapura, Vignana Nagar, Jagadish Nagar, Doddanakundi

North West-2 : Kamakshi Palya, Kamalanagar, Agrahara Dasarahalli, West off chord, road-1&2.

For any problems regarding the water supply and all, publics can contact 24x7 call centre: 22238888 helpline number: 1916 & whats app no: 8762228888.

# ಓದುಗಕೋಟಿಗೆಡಿಜಿಟಲ್‌ಗ್ರಂಥಾಲಯಆಪ್ ಸಮರ್ಪಣೆ

ದೇಶದಲ್ಲೇ ಮೊತ್ತ ಮೊದಲ ಡಿಜಿಟಲ್ ಗ್ರಂಥಾಲಯ ಮತ್ತು ಡಿಜಿಟಲ್ ಗ್ರಂಥಾಲಯ ಆಪ್‌ನ್ನು ಸೇವೆಗೆ ಸಮರ್ಪಣೆ ಮಾಡಲಾಯಿತು.

ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಇಲಾಖೆ ಆಶ್ರಯದಲ್ಲಿ ಬುಧವಾರ ಹಂಪಿ ನಗರದ ನಗರ ಕೇಂದ್ರ ಗ್ರಂಥಾಲಯಯದ ಗ್ರಂಥಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಡಿಜಿಟಲ್ ಗ್ರಂಥಾಲಯ ಮತ್ತು ಡಿಜಿಟಲ್ ಗ್ರಂಥಾಲಯ ಆಪ್‌ಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವಎಸ್. ಸುರೇಶ್‌ಕುಮಾರ್, ತಂತ್ರಜ್ಞಾನ ಸೌಲಭ್ಯದೊಂದಿಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಡಿಜಿಟಲೀಕರಣಗೊಳಿಸುವ, ಇಡೀ ದೇಶದಲ್ಲಿ ಮೊಟ್ಟಮೊದಲನೆಯ ಯೋಜನೆ ಇದಾಗಿದ್ದು, ಸಾರ್ವಜನಿಕರು ಹಾಗೂ ಓದುಗಕೋಟಿಯನ್ನು ವಿಶಿಷ್ಟವಾದ ಕಲಿಕಾ ಆಯಾಮ ಕ್ಕೆತೊಡಗಿಸುವ ಸರ್ಕಾರಿ ಪ್ರೇರಿತ ಬೃಹತ್‌ಅಭಿಯಾನ ಇದಾಗಿದೆ ಎಂದರು.

ಸುಮಾರು 272 ಸಾರ್ವಜನಿಕ ಗ್ರಂಥಾಲಯಗಳಲ್ಲಿ ಲಭ್ಯವಿರುವ ಹಕ್ಕುಸ್ವಾಮ್ಯ ಹೊಂದಿರುವ ಕೃತಿಗಳನ್ನು ಹೊರತುಪಡಿಸಿ ಉಳಿದೆಲ್ಲವೂ ಇನ್ನು ಮುಂದೆ ಸಾರ್ವಜನಿಕರು ತಮ್ಮ ಮೊಬೈಲ್‌ನಲ್ಲಿಯೇ 'ಸಾರ್ವಜನಿಕಇ–ಗ್ರಂಥಾಲಯಆಪ್' ಮೂಲಕವೇ ಓದಬಹುದಾಗಿದೆ. ಸುಮಾರು ಒಂದು ಲಕ್ಷ ಪುಸ್ತಕಗಳನ್ನು ಈಗಾಗಲೇ ಆಪ್‌ನಲ್ಲಿ ವೆಬ್‌ಸೈಟ್‌ನಲ್ಲಿ ಡಿಜಿಟಲೀಕರಣಗೊಳಿಸಿ ಅಡಕಗೊಳಿಸಲಾಗಿದೆ. ನಿಯತಕಾಲಿಕಗಳು, ಭಾಷಾ ಪುಸ್ತಕಗಳು, ವಿಡಿಯೋಗಳು..ಹೀಗೆ ಎಲ್ಲವೂ ಇದೇ ಪ್ಲಾಟ್‌ಫಾರಂನಲ್ಲಿ ದೊರೆಯಲಿವೆ ಎಂದು ಸಚಿವರು ಹೇಳಿದರು. ಗ್ರಂಥಾಲಯವನ್ನು ಓದುಗರ ಮನೆ ಬಾಗಿಲಿಗೆ, ಅವರ ಬೆರಳ ತುದಿಗೆ ತಂದುಕೊಳ್ಳುವ ಒಂದು ವ್ಯವಸ್ಥೆ ಇದಾಗಿದ್ದು, ಈ ಮೂಲಕ 6 ಕೋಟಿ ಗ್ರಂಥಾಲಯಗಳೇ ಸ್ಥಾಪನೆಯಾದಂತಾಗಿದೆ ಎಂಬ ಭಾವನೆ ಮೂಡುವಂತಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಇದು ಒಂದು ಸಾಂಸ್ಕೃತಿಕ ಪಲ್ಲಟ ಎನ್ನಬಹುದಾಗಿದೆ. ಸುಮಾರು 95000 ಇಂಗ್ಲಿಷ್ ಪುಸ್ತಕಗಳು ಇಲ್ಲಿವೆ. ಲೇಖಕರು, ಪ್ರಕಾಶಕರು ಈ ಸಾಂಸ್ಕೃತಿಕ ಪಲ್ಲಟಕ್ಕೆ ತಮ್ಮನ್ನು ತಾವು ಹೆಚ್ಚೆಚ್ಚು ಮುಕ್ತವಾಗಿ ತೆರೆದುಕೊಳ್ಳಬೇಕಾದ ಕಾಲ ಇದಾಗಿದೆ ಎಂದು ಸಚಿವರು ಹೇಳಿದರು. ಹಾಗೆಂದ ಮಾತ್ರಕ್ಕೆ ನಮ್ಮ ಲೇಖಕರು, ಪ್ರಕಾಶಕರ ಹಿತಕ್ಕೆ ವಿರುದ್ಧವಾದ ಯಾವ ನಿರ್ಣಯವನ್ನು ನಾನು ತೆಗೆದುಕೊಳ್ಳುತ್ತೇನೆಂಬ ಭಾವನೆ ಬೇಡ. ಈ ಮಾತನ್ನು ನಾನು ವಿಶ್ವಾಸ ಮತ್ತುಧೈರ್ಯದಿಂದ ತಿಳಿಸಲು ಇಚ್ಛಿಸುತ್ತೇನೆ. ಡಿಜಿಟಲೀಕರಣದ ಮೂಲಕ ನಾವು ಕಾಲಕ್ಕೆ ತಕ್ಕಂತೆ ಬದಲಾವಣೆಯಾಗಬೇಕಿದೆ. ಕಿಂಡಲ್‌ನಂತಹ ತಾಂತ್ರಿಕ ಆವಿಷ್ಕಾರಗಳ ಮೂಲಕ ಪುಸ್ತಕ ಓದಬಹುದಾಗಿದೆ. ಕನ್ನಡದ ಪುಸ್ತಕಗಳೂ ಸಹ ಕಿಂಡಲ್‌ನಲ್ಲಿ ದೊರೆಯುತ್ತವೆ. ಆದರೆ ವೈಯಕ್ತಿಕವಾಗಿ ನನಗೆ

ಕಿಂಡಲ್‌ನಂತಹ ವ್ಯವಸ್ಥೆ ಕುರಿತು ಒಲವಿಲ್ಲ. ಆದರೆಜನರ ಒಲವನ್ನು ಮತ್ತು ಅಭಿಪ್ರಾಯವನ್ನು ನಾವು ಗೌರವಿಸಬೇಕಾಗುತ್ತದೆ ಎಂದೂ ಸಚಿವರು ಹೇಳಿದರು.

**ಪುಸ್ತಕ ಸಂಸ್ಕೃತಿಗೆ ಪ್ರೋತ್ಸಾಹ ನಿರಂತರ:** ಪುಸ್ತಕ ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ನಮ್ಮ ಸರ್ಕಾರದ ನಿಲುವು ಮುಂದೆಯೂ ಮುಂದುವರೆಯುತ್ತದೆ. ಜನರು ಆಕರ್ಷಣೆಗೊಳ್ಳುವ ಮಾಧ್ಯಮದಲ್ಲಿಯೇ ನಾವು ಅವರನ್ನು ಓದಿನ ಕಡೆಗೆ ಪ್ರೇರೇಪಿಸಬೇಕಾಗುತ್ತದೆ. ಇದು ಸಾರ್ವಜನಿಕಜವಾಬ್ದಾರಿಯೂ ಆಗಿದೆ ಎಂಬುದನ್ನು ನಾವು ಮರೆಯುವಂತಿಲ್ಲ ಎಂದರು. ಹಾಗಾಗಿ ಎಲ್ಲ ಲೇಖಕರು, ಪ್ರಕಾಶಕರು ಇದರ ಬಗ್ಗೆ ಮುಕ್ತ ನಿಲುವು ಹೊಂದುವಂತಾಗಲಿ. ಆ ಮೂಲಕ ನಾವೆಲ್ಲಕೂಡಿ ಸಾರ್ವಜನಿಕರನ್ನು ಓದಿನ ಕಡೆಗೆ ಪ್ರೇರೇಪಿಸಲು ಮುಂದಾಗೋಣ ಎಂದೂ ಸುರೇಶ್‌ಕುಮಾರ್ ಅಭಿಪ್ರಾಯಪಟ್ಟರು.

ನಾನು ವಿದ್ಯಾರ್ಥಿದೆಸೆಯಿಂದಲೂ ಒಂದು ರೀತಿಯಲ್ಲಿ ಪುಸ್ತಕದ ಹುಳುವೇ ಹೌದು. ಮಲ್ಲೇಶ್ವರಂ ಕಾಲೇಜಿನಲ್ಲಿ ನಾನು ಓದುತ್ತಿದ್ದಾಗ ಅಲ್ಲಿನ ಸಿಟಿ ಸೆಂಟ್ರಲ್ ಲೈಬ್ರರಿಯೇನನಗೆ ಮನೆಯಾಗಿತ್ತು. ಶಾಲೆ ಬಿಟ್ಟರೇ ಆ ಗ್ರಂಥಾಲಯದಲ್ಲಿ ನನ್ನ ಲಭ್ಯತೆ ಎಂಬುದು ನನ್ನ ಸಹಪಾಠಿಗಳ ಮತ್ತು ಉಪಾಧ್ಯಾಯರಿಗೆಲ್ಲ ಗೊತ್ತಾಗುವಷ್ಟು ಮಟ್ಟಿಗೆ ಅದರೊಂದಿಗೆ ಅವಿನಾಭಾವ ಸಂಬಂಧವಿತ್ತು ಎಂದರು. ಈಗಲೂ ನನ್ನ ಮನೆಯ ಒಂದು ಕೊಠಡಿಯೇ ಗ್ರಂಥಾಲಯವಾಗಿದ್ದು, 3500ಕ್ಕೂ ಹೆಚ್ಚು ಪುಸ್ತಕಗಳ ಸಂಗ್ರಹವಿದೆ, ಮುಂದೆ ಈ ಪುಸ್ತಕಗಳನ್ನು ಯಾವುದಾದರೂ ಶಾಲೆ ಇಲ್ಲವೇ ಗ್ರಂಥಾಲಯಕ್ಕೆ ನೀಡುವ ಇರಾದೆಇದೆ ಎಂದು ಸಚಿವರು ತಮ್ಮ ಓದುವ ಹವ್ಯಾಸವನ್ನು ಬಿಚ್ಚಿಟ್ಟರು.

ಗ್ರಂಥಾಲಯ ಪಿತಾಮಹ ಶ್ರೀ ರಂಗನಾಥ್ ಅವರನ್ನು ಸ್ಮರಿಸಿದ ಸಚಿವರು, ಯಾವುದೇ ಇಲಾಖೆಯುತಮ್ಮ ಸಂಸ್ಥಾಪಕರನ್ನು ಇಷ್ಟೊಂದು ಮಟ್ಟಿಗೆ ಸ್ಮರಿಸಿಕೊಂಡ ನಿದರ್ಶನಗಳೇ ಇಲ್ಲ. ಪ್ರತಿ ಗ್ರಂಥಾಲಯದಲ್ಲೂ ರಂಗನಾಥ್ ಅವರ ಭಾವಚಿತ್ರಗಳಿವೆ, ಪ್ರತಿ ವರ್ಷವೂ ಗ್ರಂಥಾಲಯ ಸಪ್ತಾಹ ಆಚರಿಸುವುದಲ್ಲದೇ ತಮ್ಮ ಸಂಸ್ಥಾಪಕರ ಸ್ಮರಣೆ ಮಾಡುವುದು ಗ್ರಂಥಾಲಯ ಇಲಾಖೆಯ ವಿಶೇಷತೆಯೇ ಹೌದು ಎಂದರು.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಮತ್ತಿತರರು ಭಾಗವಹಿಸಿದ್ದರು. ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಡಾ. ಸತೀಶ್‌ಕುಮಾರ್‌ಎಸ್. ಹೊಸಮನಿ ಸ್ವಾಗತಿಸಿ, ಇಲಾಖೆಯ ಕಾರ್ಯವೈಖರಿ, ಡಿಜಿಟಲೀಕರಣ, ಗ್ರಂಥಾಲಯ ಆಪ್‌ಕುರಿತು ವಿವರಣೆ ನೀಡಿದರು.

Photo Caption :

Hon'ble Union Minister Shri .V.Muraleedharan Minister of State for External Affaires Inaugurate VIDESH SAMPARK Out reach Seminor today at Vikasa Souda, Bangalore., Shri J C Madhuswamy Minister for Law & Parliamentary Affaires,Shri Sanjay Bhaytacharya , Secretary Minister of External Affaires,Shri.T.M.Vijaya Bhaskar Chief Secretary Govt of Karnataka and others were also Present.